# ಪ್ರಸ್ತುತ ಪಡಿಸುವುದು

ಈ *ಶಿಕ್ಷಕನ ಮಾರ್ಗದರ್ಶಿಯಲ್ಲಿಯ* ಪಾಠಗಳನ್ನು ಉತ್ತಮ ಪ್ರಸ್ತುತ ಪಡಿಸುವಿಕೆಯು ಉತ್ತಮ ಸಿದ್ಧತೆಯ ಮತ್ತು ರೂಢಿಯ ಪರಿಣಾಮವಾಗಿರುವುದು. ಶಿಕ್ಷಕನ ಗುರಿಯು ಪಾಠವನ್ನು ಸಂಕ್ಷೇಪವಾಗಿ, ಆಸಕ್ತಿ ಹುಟ್ಟಿಸುವಂತೆ, ಅರ್ಥವಾಗುವ ರೀತಿಯಲ್ಲಿ, ಮತ್ತು ನಿಶ್ಚಿತಪಡಿಸುವ ರೀತಿಯಲ್ಲಿ ಪ್ರಸ್ತುತ ಪಡಿಸುವುದಾಗಿರಬೇಕು. ವ್ಯರ್ಥವಾದ ಚಲನೆಗಳು ಬೇಸರ ತರಿಸಬಹುದು. ಈ ಕಾರಣದಿಂದ ಶಿಕ್ಷಕನು ಅಧ್ಯಯನ ಮಾಡುವಾಗ ತನ್ನ ಸಮಯವನ್ನು ಜಾಣ್ಮೆಯಿಂದ ಉಪಯೋಗಿಸತಕ್ಕದ್ದು.

ಒಂದು ಪಾಠವನ್ನು ಪ್ರಸ್ತುತ ಪಡಿಸುವಾಗ ಈ ಕೆಳಗಿನದನ್ನು ಯೋಚಿಸತಕ್ಕದ್ದು:

## ವ್ಯವಸ್ಥೆಗಳು

ಸಂಬಂಧಪಟ್ಟ ವ್ಯವಸ್ಥೆಗಳು ಪಾಠವನ್ನು ಹೇಳಲಿಕ್ಕೆ ಮತ್ತು ಸ್ವೀಕರಿಸಲಿಕ್ಕೆ ಮಹತ್ವದ್ದಾಗಿರುತ್ತದೆ. ಸ್ಥಳವು ಬಹಳ ಪ್ರಾಮುಖ್ಯವಾದದ್ದು. ಶಿಕ್ಷಕನು ವಿದ್ಯಾರ್ಥಿಗೆ ಬಹಳ ಸಮೀಪದಲ್ಲಿ ಹಾಗೆಯೇ ಬಹಳ ದೂರದಲ್ಲಿ ಕುಳಿತು ಕೊಳ್ಳುವದನ್ನು ತಪ್ಪಿಸಿಕೊಳ್ಳಬೇಕು. ಅತೀ ಸಮೀಪದಲ್ಲಿ ಕೂತುಕೊಳ್ಳುವುದು ಕಲಿಯುವವನು ಸ್ಥಳ ಹುಡುಕುವದಕ್ಕೆ ಕಾರಣವಾಗಬಹುದು, ಮತ್ತು ಬಹಳ ದೂರದಲ್ಲಿ ಕುಳಿತುಕೊಳ್ಳುವುದು ಕಲಿಯುವವನು ದೂರದ ಬಗ್ಗೆ ಭಾವಿಸಬಹುದು, ಹೀಗೆ ವಿರೋಧಿಸುವ ಮತ್ತು ಸ್ವೀಕರಿಸಲಿಕ್ಕಾಗದ ವಾತಾವರಣ ಸೃಷ್ಟಿಯಾಗಬಹುದು.

ಸಾಧ್ಯವಾದರೆ ಶಿಕ್ಷಕನು ಕಲಿಯುವವನ ಪಕ್ಕದಲ್ಲಿ, ಟೇಬಲಿನ ಬಳಿಯಲ್ಲಿ ಇಲ್ಲವೇ ಖುರ್ಚಿಯಲ್ಲಿ ಕುಳಿತುಕೊಳ್ಳಬಹುದು. ಈ ರೀತಿಯ ವ್ಯವಸ್ಥೆಯಿಂದ ಶಿಕ್ಷಕನು ಮತ್ತು ಕಲಿಯುವವನು ಒಂದೇ ಅಧ್ಯಯನ ಪ್ರಶ್ನಾವಳಿಯನ್ನು ಸಾಧ್ಯವಿದ್ದರೆ, ಒಂದೇ ಬೈಬಲನ್ನು ಉಪಯೋಗಿಸಿ ಅಧ್ಯಯನ ಮಾಡಬಹುದು. ಶಿಕ್ಷಕನು ಬಲಗೈಯನ್ನು ಉಪಯೋಗಿಸುವವನಾಗಿದ್ದರೆ ಬಲಗಡೆಯಲ್ಲಿ, ಎಡಗೈ ಉಪಯೋಗಿಸುವವನಾಗಿದ್ದರೆ ಎಡಗಡೆಯಲ್ಲಿ, ಕುಳಿತುಕೊಳ್ಳಬಹುದು. ಈ ರೀತಿಯಲ್ಲಿ ಕಲಿಯುವವನು ಶಿಕ್ಷಕನ ಕೈ ಮಧ್ಯದಲ್ಲಿ ಬಾರದೇ, ಅವನು ಚಿತ್ರಿಸುವದನ್ನು ಇಲ್ಲವೇ ಬರೆಯುವದನ್ನು ಸುಲಭವಾಗಿ ನೋಡಬಹುದು.

## ಸಲಕರಣೆಗಳು

*ಈ ಶಿಕ್ಷಕನ ಮಾರ್ಗದರ್ಶಿಯಲ್ಲಿ* ಪಾಠಗಳಿಗಾಗಿ ಶಿಕ್ಷಕನಿಗೆ ಅಧ್ಯಯನ ಪ್ರಶ್ನಾವಳಿ, ಒಂದು ಬೈಬಲ್ ಮತ್ತು ಒಂದು ಪೆನ್ ಬೇಕಾಗುತ್ತದೆ. ಶಿಕ್ಷಕನಿಗೆ, ಕಿಂಗ್ ಜೇಮ್ಸ್, ಅಮೇರಿಕನ್ ಸ್ಟ್ಯಾಂಡರ್ಡ್, ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ಇಲ್ಲವೇ ರಿವೈಜ್ಡ್ ಸ್ಟ್ಯಾಂಡರ್ಡ್‌ಗಳಂಥ ಬೈಬಲಿನ ಉತ್ತಮ ಭಾಷಾಂತರಗಳ ಪ್ರತಿಗಳು ಇರಬೇಕು. ಕೆಲವು ಭಾಷಾಂತರಗಳು ಉಪಯೋಗಗಳು ಅಧ್ಯಯನ ಪ್ರಶ್ನಾವಳಿಯಲ್ಲಿ ಇಲ್ಲವೇ ಬಿಟ್ಟ ಪದಗಳನ್ನು ತುಂಬಬೇಕಾದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು. ದೊಡ್ಡ ಅಕ್ಷರಗಳಿಂದ ಅಚ್ಚಾದ ಬೈಬಲ್ ಕೆಲವು ಕಡೆಗಳಲ್ಲಿ ಉಪಯುಕ್ತವಾದದ್ದಾಗಿರುವುದು, ಕಲಿಯುವವನಲ್ಲಿ ಅಧಿಕೃತ ಭಾಷಾಂತರ ಇಲ್ಲದಿದ್ದರೆ, ಚೆನ್ನಾಗಿ ಓದಲಾಗದವನಾಗಿದ್ದರೆ, ಇಲ್ಲವೇ ವಾಕ್ಯಭಾಗಗಳನ್ನು ತೆರೆಯಲು ಕಷ್ಟವಾಗುತ್ತಿದ್ದರೆ, ಶಿಕ್ಷಕ ಮತ್ತು ವಿದ್ಯಾರ್ಥಿ

ಇಬ್ಬರೂ ಒಂದೇ ಬೈಬಲನ್ನು ಉಪಯೋಗಿಸಬಹುದು. ವಿದ್ಯಾರ್ಥಿಯು ಬೈಬಲನ್ನು ಚೆನ್ನಾಗಿ ತಿಳಿದುಕೊಂಡಿರದಿದ್ದರೆ, ಮತ್ತು ಈ ಕಾರಣದಿಂದ, ವಚನಗಳನ್ನು ಕಂಡುಕೊಳ್ಳಲಿಕ್ಕೆ ಬಹಳ ಸಮಯದ ಅಗತ್ಯತೆ ಬೇಕಾಗಿದ್ದರೆ, ಪಾಠವು ಸರಳವಾಗಿ ಮುಂದುವರಿಯುವದಿಲ್ಲ, ಮತ್ತು ಪಾಠದ ಪ್ರಭಾವವು ಕಳೆದು ಹೋಗುವುದು.

ಕೆಲವು ಸಲ, ಶಿಕ್ಷಕನಿಗೆ ಹೆಚ್ಚಿನ ಪೇಪರ್ ಬೇಕಾಗಬಹುದು; ಹೀಗಿದ್ದರೂ, ಒಂದು ಅಧ್ಯಯನ ಪ್ರಶ್ನಾವಳಿಯನ್ನು ಉಪಯೋಗಿಸುತ್ತಿದ್ದರೆ, ಅದರ ಹಿಂದೆ ಬರೆಯಬಹುದು. ಇದನ್ನು ಮಾಡುವದರಿಂದ, ವಿದ್ಯಾರ್ಥಿಗೆ ಎಲ್ಲಾ ಟಿಪ್ಪಣಿಗಳೂ ಚಿತ್ರಗಳೂ ಒಂದೇ ಶೀಟಿನ ಮೇಲೆ ದೊರೆಯುವುದು.

**ಪಾಠವನ್ನು ಪ್ರಸ್ತುತ ಪಡಿಸುವುದು**

ಪಾಠವನ್ನು ಪ್ರಸ್ತುತಪಡಿಸುವ ಮೊದಲು, ಶಿಕ್ಷಕನು ಕಲಿಯುವವನನ್ನು ಸಂದರ್ಶಿಸಲು ಸಮಯ ತೆಗೆದುಕೊಳ್ಳಲು ಬಯಸಬಹುದು. ಇದು ಸ್ವಲ್ಪ ಸಮಯವಾಗಿದ್ದು ಶಿಕ್ಷಕನು ಕಲಿಯುವವನನ್ನು ತಿಳಿದುಕೊಳ್ಳಲು ಮತ್ತು ಅವನೊಂದಿಗೆ ಒಳ್ಳೇ, ಸ್ನೇಹಪರವಾದ ಸಂಬಂಧವನ್ನು ಸ್ಥಾಪಿಸಲು ಉಪಯೋಗಿಸಬೇಕು.

ಮೊದಲನೆಯದಾಗಿ, ಶಿಕ್ಷಕನು ಪಾಠವನ್ನು ಪರಿಚಯಮಾಡಿ ಕೊಡುವನು. ಈ ಸಮಯದಲ್ಲಿ ಶಿಕ್ಷಕನು ಮುಂದೆ ಬರುವ ಪಾಠಕ್ಕಾಗಿ ಸಿದ್ಧಪಡಿಸಿಕೊಳ್ಳುವನು.

ಎರಡನೆಯದಾಗಿ, ಪಾಠದ ಪೀಠಿಕೆಯ ನಂತರ ಶಿಕ್ಷಕನು ಪಾಠದ ಪ್ರತಿಯೊಂದು ಭಾಗವನ್ನು ಹೇಳುವನು. ಶಿಕ್ಷಕನು ಪ್ರತಿಯೊಂದು ಭಾಗವನ್ನು ಪರಿಚಯಿಸುವನು, ಪ್ರತಿಯೊಂದು ಭಾಗವನ್ನು ಪ್ರಸ್ತುತ ಪಡಿಸುವನು, ಮತ್ತು ಪ್ರತಿಯೊಂದು ಭಾಗವನ್ನು ಸಾರಾಂಶಮಾಡಿ ಹೇಳುವನು. ಇಡೀ ಅಧ್ಯಯನವನ್ನು ಬೋಧಿಸಿದನಂತರ, ಶಿಕ್ಷಕನು, ಕಲಿಯುವವನು ಎಲ್ಲವನ್ನೂ ಅರ್ಥಮಾಡಿಕೊಂಡಿರುವನೆಂಬುದನ್ನು ನಿಶ್ಚಿತಪಡಿಸಿಕೊಳ್ಳಲು ಇದೇ ಪಾಠವನ್ನು ಪುನರಾವಲೋಕನ ಮಾಡತಕ್ಕದ್ದು.

ಮೂರನೆಯದಾಗಿ, ಅಧ್ಯಯನದ ಸಮಯದಲ್ಲಿ ಕಲಿತುಕೊಂಡದ್ದನ್ನು ಸಂಕ್ಷಿಪ್ತ ವಾಗಿ ಹೇಳಿ ವಿದ್ಯಾರ್ಥಿಯು ಸ್ವೀಕರಿಸಿದ್ದಾನೆಂದು ನಿರೀಕ್ಷಿಸಿ ನಿರ್ಣಯಗಳನ್ನು ಹೇಳು ವದರಿಂದ ಪಾಠವನ್ನು ಮುಕ್ತಾಯಗೊಳಿಸಬೇಕು.

ಕೊನೆಯದಾಗಿ, ಶಿಕ್ಷಕನು ಕಲಿಯುವವನಿಂದ ಉತ್ತರವನ್ನು ಹುಡುಕುವನು, ಅಂದರೆ, ಪಾಠದಲ್ಲಿ ಉತ್ತರವು ಸೂಚಿಸಲ್ಪಟ್ಟಿದ್ದರೆ ಹಾಗೆ ಮಾಡುವನು.

*ಶಿಕ್ಷಕನ ಮಾರ್ಗದರ್ಶಿಯಲ್ಲಿಯ* ಪಾಠಗಳನ್ನು ಪ್ರಸ್ತುತಪಡಿಸುವಾಗ, ಶಿಕ್ಷಕನು ಪ್ರತಿಯೊಂದು ಪರಿಶುದ್ಧ ಬರಹದ ಭಾಗವನ್ನು ಓದುವ ಮೊದಲು ಒಂದು ಪ್ರಶ್ನೆಯನ್ನು ಕೇಳಬೇಕು, ಅದು ವಿದ್ಯಾರ್ಥಿಯು ಖಾಲಿಯಾದ ಸ್ಥಳದಲ್ಲಿ ತುಂಬಬೇಕಾದ ಪದಗಳನ್ನು ತೋರಿಸಲು ಸಹಾಯ ಮಾಡುವುದು. ಯಾಕಂದರೆ ಕೆಲವು ಸಲ ಕಲಿಯುವವನಿಗೆ ಕೆಲವು ಸಲ ಎಲ್ಲಿ ಬರೆಯಬೇಕು, ಏನನ್ನು ಬರೆಯಬೇಕು, ಮತ್ತು ಕೆಲವು ಸಲ ಪದಗಳನ್ನು ಹೇಗೆ ಬರೆಯಬೇಕು ಎಂಬುದು ಕಷ್ಟವಾಗುವುದು, *ಶಿಕ್ಷಕನು* ಅಧ್ಯಯನ ಪ್ರಶ್ನಾವಳಿಯಲ್ಲಿ ಖಾಲಿಯಾದ ಸ್ಥಳಗಳನ್ನು ತುಂಬಬೇಕು.

ಅಧ್ಯಯನ ಪ್ರಶ್ನಾವಳಿಯಲ್ಲಿಯ ಖಾಲಿಯಿರುವ ಸ್ಥಳಗಳಲ್ಲಿ ಶಿಕ್ಷಕನು ತುಂಬುವುದು ಹೆಚ್ಚಿನ ಲಾಭವು ಅಧ್ಯಯನ ಪ್ರಶ್ನಾವಳಿಯು ಅವನ ವಶದಲ್ಲಿರುವುದು ಮತ್ತು ಈ ಕಾರಣದಿಂದ ಯಾವ ಅಡತಡೆಯಿಲ್ಲದೆ ಅಧ್ಯಯನ ಶೀಟಿನ ಹಿಂಬದಿಯಲ್ಲಿ ಬರೆಯಲು ಇಲ್ಲವೇ ಚಿತ್ರಿಸಲು ಶಕ್ತನನ್ನಾಗಿ ಮಾಡುವುದು.

ವಿದ್ಯಾರ್ಥಿಯು ಸೂಚಿತ ಪರಿಶುದ್ಧ ಭಾಗವನ್ನು ಗಟ್ಟಿಯಾಗಿ ಓದುವಂತೆ ಕೇಳಿಕೊಳ್ಳಲ್ಪಡಬೇಕು. ಇದು ಕಲಿಯುವವನು ಎಷ್ಟು ಚೆನ್ನಾಗಿ ಓದಿರುವನು ಮತ್ತು ಪಠ್ಯವನ್ನು ಸರಿಯಾಗಿ ಓದಿದನೋ ಎಂದು ತಿಳಿಯಲು ಶಿಕ್ಷಕನಿಗೆ ಸಹಾಯ ಮಾಡುವುದು ಅದು ವಿದ್ಯಾರ್ಥಿಯ ಮೇಲೆ ಬೈಬಲನ್ನು ಜಾಗರೂಕತೆಯಿಂದ ಓದುವದರ ಮಹತ್ವವನ್ನು ಬಿಂಬಿಸುವುದು ಮತ್ತು ಬೈಬಲ್ ಹೇಳುವದರ ಪರಿಣಾಮದಿಂದ ಅವನ ಮೇಲೆ ಪ್ರಭಾವವನ್ನು ಬೀರುವುದು.

ಶಿಕ್ಷಕನು ಕಲಿಯುವವನನ್ನು ಖಾಲಿಯಿರುವ ಸ್ಥಳಗಳಲ್ಲಿ ಹೋಗಬೇಕಾದ ಉತ್ತರಗಳನ್ನು ಬೈಬಲಿನಲ್ಲಿ ಕಂಡುಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಈ ರೀತಿಯಲ್ಲಿ ಪಾಠವು ಪೂರ್ತಿಗೊಂಡಾಗ, ಶಿಕ್ಷಕನು ಕೇಳಬೇಕು, "ನಾನು ಹೇಳಿದ್ದು ಇದನ್ನೋ, ಇಲ್ಲವೇ ಬೈಬಲ್ ಬೋಧಿಸುವುದು ಇದನ್ನೋ. ಇದು ನಾನು ಹೇಳುವದಷ್ಟೇ ಆಗಿದ್ದರೆ, ಇದನ್ನು ತಿರಸ್ಕರಿಸಿರಿ, ಆದರೆ ಇದು ಬೈಬಲ್ ಹೇಳುವುದು ಆಗಿದ್ದರೆ, ಆಗ ಇದನ್ನು ಸ್ವೀಕರಿಸಿರಿ."

ಶಿಕ್ಷಕನು ವಿದ್ಯಾರ್ಥಿಯ ಕಲಿಯುವ ವೇಗವನ್ನು ಅನುಸರಿಸಬೇಕು. ಅವಸರದಿಂದ ಮುಂದುವರಿಯುವುದು ವಿದ್ಯಾರ್ಥಿಯನ್ನು ಕಳೆದುಕೊಳ್ಳಬಹುದು, ಮತ್ತು ನಿಧಾನವಾಗಿ ಹೋಗುವುದು ಅಧ್ಯಯನವನ್ನು ಬೇಸರ ತರಿಸುವಂತೆ ಮಾಡಬಹುದು.

ಶಿಕ್ಷಕನು ಮುಂದಿನ ವಿಷಯಕ್ಕೆ ಹೋಗುವ ಮೊದಲು ಪ್ರತಿಯೊಂದು ಅಂಶವನ್ನು ಕಲಿಯುವವನು ಅರ್ಥಮಾಡಿಕೊಳ್ಳುವಂತೆ ನೋಡಿಕೊಳ್ಳಬೇಕು.

ಕಲಿಯುವವನು ಶಿಕ್ಷಕನಿಗೆ ಉತ್ತರಕೊಡಲು ತಿಳಿಯದ ಪ್ರಶ್ನೆಯನ್ನು ಕೇಳಿದರೆ, ಶಿಕ್ಷಕನು ಪ್ರಶ್ನೆಯನ್ನು ಅಭ್ಯಾಸಮಾಡಲು ಸಮಯ ತೆಗೆದುಕೊಂಡು ಆ ಮೇಲೆ ಅದನ್ನು ವಿದ್ಯಾರ್ಥಿಯೊಂದಿಗೆ ಅಧ್ಯಯನ ಮಾಡಬಹುದು. ಕಲಿಯುವವನು ಒಂದು ಪ್ರಶ್ನೆ ಕೇಳಿದರೆ ಇಲ್ಲವೇ ಪಾಠಕ್ಕೆ ಸಂಬಂಧಿಸದೆ ಕೂಡಲೇ ಉತ್ತರ ಕೊಡಲಿಕ್ಕಾಗದ ಪ್ರಶ್ನೆಯನ್ನು ಕೇಳಿದರೆ, ಶಿಕ್ಷಕನು ಸಮಯ ತೆಗೆದುಕೊಂಡು ಅನಂತರದಲ್ಲಿ ಅಂಥ ಸಂಬಂಧಪಡದ ವಿಷಯದ ಅಧ್ಯಯನ ಮಾಡಬಹುದು.

ಪಾಠವನ್ನು ಪ್ರಸ್ತುತ ಪಡಿಸಿದ ನಂತರ ಮತ್ತು ಶಿಕ್ಷಕನಿಗೆ ತನ್ನ ಪ್ರಸ್ತುತ ಪಡಿಸುವಿಕೆಯ ಮೇಲೆ ಪ್ರತಿಬಿಂಬಿಸಲು ಸಮಯ ತೆಗೆದುಕೊಂಡ ನಂತರ, "ಸಿದ್ಧತೆಯ" ಮೇಲಿನ ಪಾಠದಲ್ಲಿ ಎಂಟು ಮೌಲ್ಯಮಾಪನ ಪ್ರಶ್ನೆಗಳನ್ನು ಯೋಚಿಸಬೇಕು ಮತ್ತು ಅವನು ಪಾಠ ಪ್ರಸ್ತುತ ಪಡಿಸುವಲ್ಲಿ ಎಷ್ಟು ಚೆನ್ನಾಗಿ ಮಾಡಿದನು ಎಂಬುದನ್ನು ತಿಳಿದುಕೊಳ್ಳಬೇಕು.

© 2009 Truth for Today